
ಕರಾವಳಿ ಕರ್ನಾಟಕ

ಜನಪದ ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್







ಜಾನಪದ ಪುಸ್ತಕ ಮಾಲೆ - ೮

ಕರಾವಳಿ ಕರ್ನಾಟಕದ ಜನಪದ ಕಲೆಗಳು

ಡಾ|| ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

KARAVALI KARNATAKA JANAPADA KALEGALU - By **Dr. Chakkere Shivashankar,** Pulished by Karnataka Janapada Parishath, No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143 / 7271555

ಪ್ರಥಮ ಮುದ್ರಣ : ೨೦೦೮

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

ಗ್ರಂಥ ಪ್ರಕಟಣಾ ಸಲಹಾ ಸಮಿತಿ

ಮುದ್ರಕರು :

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು **'ಕರಾವಳಿ ಕರ್ನಾಟಕದ ಜನಪದ ಕಲೆಗಳು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಲೇಖಕರ ಮಾತು

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ.

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಚಕ್ಕೆರೆ ಶಿವಶಂಕರ್

ಆಟಿಕಳೆಂಜ

ದಕ್ಷಿಣ ಕನ್ನಡ ಜಿಲ್ಲೆಯ ಅಸ್ಪೃಶ್ಯ ಜನಾಂಗಗಳಾದ ನಲಿಕೆಯವರು ಮತ್ತು ಮೇರರಲ್ಲಿ ಕಂಡುಬರುವ ಅತ್ಯಂತ ವರ್ಣರಂಜಿತವಾದ ಪ್ರದರ್ಶನ ಕಲೆಯೇ ಆಟಿಕಳೆಂಜ. ತುಳುವರಲ್ಲಿ ಆಟಿ ಎಂದರೆ ಆಷಾಢಮಾಸ ; ಕಳೆಂಜ ಎಂಬುದು ಭೂತ. ಆಷಾಢಮಾಸದಲ್ಲಿ ಮೂರು ದಿನಗಳಿಂದ ಹದಿನೈದು ದಿನಗಳವರೆಗೂ ಹಗಲುಹೊತ್ತಿನಲ್ಲಿ ಈ ಕುಣಿತವು ನಡೆಯುತ್ತದೆ. ಜನ-ಜಾನುವಾರುಗಳಿಗೆ ತಗಲುವ ಪೀಡೆಗಳ ನಿವಾರಣೆಯ ಮಾಂತ್ರಿಕ ಆಶಯವನ್ನುಳ್ಳ ಈ ಕುಣಿತದ ಹಿಂದೆ ನಂಬಿಕೆಯೊಂದು ಕಾರ್ಯ ನಿರ್ವಹಿಸುತ್ತಿದೆ.



'ಹಿಂದೆ ಭೂತಪ್ರೇತಗಳು ಮತ್ತು ರೋಗಗಳು ಒಟ್ಟಾಗಿ ಭೂಲೋಕವನ್ನು ವಿಪರೀತವಾಗಿ ಹಿಂಸಿಸುತ್ತಿದ್ದವು. ಜನರ ಮೊರೆ ಕೇಳಿ ದೇವಪುತ್ರ ಮಾಯದರಸ ಕೃಷ್ಣ ಆಕಾಶದಿಂದ ಭೂಮಿಗಿಳಿದು

ಬಂದು ಆಟಿಕಳೆಂಜ ವೇಷದಲ್ಲಿ ಜನರನ್ನು ಕಾಡುತ್ತಿದ್ದ ಭೂತಪ್ರೇತಗಳನ್ನು, ರೋಗರುಜಿನಗಳನ್ನು ನಿವಾರಿಸಿದನು. ಆದ್ದರಿಂದಲೇ ಆಷಾಢಮಾಸದಲ್ಲಿ ಆಟಿಕಳೆಂಜವನ್ನು ಆಚರಿಸಲಾಗುವುದು' ಎಂದು ನಲ್ಕೆ ಜನರು ಅಭಿಪ್ರಾಯಪಡುತ್ತಾರೆ.

ಆಟಿ ತಿಂಗಳ ಹುಣ್ಣಿಮೆಯ ಮೊದಲ ದಿನದಂದೇ ಆಟಿಕಳೆಂಜ ವೇಷ ಧರಿಸಿದ ನಲ್ಕೆ ಜನಾಂಗದವರು ಪ್ರತಿಯೊಂದು ಮನೆಯ ಅಂಗಳಕ್ಕೂ ಹೋಗಿ ಕುಣಿಯುತ್ತಾರೆ. ಕಾಲಿಗೆ ಚಿಕ್ಕ ಗಗ್ಗರ, ಸೊಂಟಕ್ಕೆ ತುಂಡು ವಸ್ತ್ರ ಧರಿಸಿ, ಅದರ ಮೇಲೆ ಎಳೆಯ ತೆಂಗಿನಗರಿಯ ಜಾಲರಿಯಂತಹ ತಿರಿ, ತಲೆಗೆ ಅಡಿಕೆ ಹಾಳೆಯಿಂದ ತಯಾರಿಸಿದ ಉದ್ದನೆಯ ಟೊಪ್ಪಿಗೆ, ಹಣೆಗೆ ಕಂಚಿನ ಕೇದಿಗೆ ಮುಂದಲೆ, ಮೈಗೆ ಮತ್ತು ಮುಖಕ್ಕೆ ಬಳಿದ ಕೆಂಪು ಹಾಗೂ ಬಿಳಿಯ ಬಣ್ಣದ ರೇಖೆಗಳು, ಮುಖಕ್ಕೆ ಕಪ್ಪು ಮೀಸೆ, ಕೈಯಲ್ಲಿ ತಾಳೆಗರಿಯ ಕೊಡೆ ಹಿಡಿದ ವೇಷಧಾರಿಗಳು ಊರಿನ ಮನೆಗಳ ಬಳಿ ಬಂದಾಗ, ಊರಿಗೆ ಬಂದ ಮಾರಿಯನ್ನು, ರೋಗರುಜಿನಗಳನ್ನು ಓಡಿಸಲು ಆಟಿಕಳೆಂಜ ಬಂದಿದ್ದಾನೆ ಎಂದು ಜನ ನಂಬುತ್ತಾರೆ.

ಆಟಿಕಳೆಂಜ ವೇಷಧಾರಿಯ ಜತೆಯಲ್ಲಿ ಹೆಣ್ಣೊಬ್ಬಳು ತೆಂಬರೆ ಎಂಬ ವಾದ್ಯವನ್ನು ನುಡಿಸುತ್ತಾ ಆಟಿಕಳೆಂಜನ ಹಾಡು ಹಾಡುತ್ತಾಳೆ. ಆಟಿಕಳೆಂಜನು ಕೈಯಲ್ಲಿ ಹಿಡಿದ ತಾಳೆಗರಿಯ ಕೊಡೆಯನ್ನು ಅಂದರೆ ತತ್ತರವನ್ನು ಗಿರಗಿರನೆ ತಿರುಗಿಸುತ್ತಾ ತೆಂಬರೆಯ ನಾದದ ಗತ್ತಿಗೆ ತಕ್ಕಂತೆ ಕುಣಿಯುತ್ತಾನೆ. ಆಟಿಕಳೆಂಜನ ಮೇಲೆ ಹಾಡುವ ಹಾಡಿನ ಒಂದು ಅಥವಾ ಎರಡನೆಯ ಸಾಲಿನಲ್ಲಿ ಆಟಿಕಳೆಂಜ ವೇಷಧಾರಿಯ ಬದುಕಿನ ಚಿತ್ರಣವಿರುತ್ತದೆ.

ಸುಳ್ಯ ತಾಲ್ಲೂಕಿನ ಕನ್ನಿಕಳೆಂಜ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ

ಮೇರರು ಆಚರಿಸುವ ಬಿರ್ಮರೆ ಮಾಣಿಲು ಆಟಿಕಳೆಂಜನ ಮತ್ತೆರಡು ಭಿನ್ನ ರೂಪಗಳು. ಕನ್ನಿಕಳೆಂಜದಲ್ಲಿ ಕಳೆಂಜ ಮತ್ತು ಕನ್ನಿ ಎಂಬ ಎರಡು ವೇಷಗಳಿರುತ್ತವೆ. ಸೊಂಟಕ್ಕೆ ತುಂಡು ವಸ್ತ್ರ ಸುತ್ತಿ ಅದರ ಮೇಲೆ ಎಳೆಯ ತೆಂಗಿನಗರಿಯನ್ನು ಪಾದದವರೆಗೂ ಬರುವಂತೆ ಸಣ್ಣದಾಗಿ ಸೀಳಿ ಜಾಲರಿಯಂತೆ ಸೊಂಟದ ಸುತ್ತಲೂ ಸುತ್ತಿಕೊಳ್ಳುತ್ತಾರೆ. ಕಪ್ಪು ಅಥವಾ ಬಿಳಿಯ ಉದ್ದ ತೋಳಿರುವ ಅಂಗಿ, ಮಣಿಕಟ್ಟು ಮತ್ತು ತೋಳುಗಳಿಗೆ ತೆಂಗಿನ ಗರಿಯಿಂದ ಹೆಣೆದ ಪುಂಡಯೆ, ಎದೆಗೆ ಮತ್ತು ಮೈಗೆ ಪೂರ್ಣವಾಗಿ ತೆಂಗಿನ ಎಳೆಯ ಗರಿಗಳ ಅಡ್ಡ ಸುತ್ತು, ತಲೆಗೆ ಅಡಿಕೆ ಹಾಳೆಯ ದೊಡ್ಡ ಟೊಪ್ಪಿ. ಗೋಂಪಾರು ಎಂದು ಇದನ್ನು ಕರೆಯುತ್ತಾರೆ. ಅದರ ಮೇಲೆ ಓಟೆ ಬಿದಿರಿನಿಂದ ಹೆಣೆದ ಟೊಪ್ಪಿ. ಆ ಟೊಪ್ಪಿಗೆ ಅಂಬಳ ಮತ್ತು ದಾಸವಾಳದ ಹೂವಿನ ಅಲಂಕಾರ, ಹರಕು ಬಟ್ಟೆಹಿಂದ ಸಿದ್ಧಪಡಿಸಿದ ಮೀಸೆ ಮತ್ತು ಗಡ್ಡ, ವಾಟೆ ಬಿದಿರಿನಿಂದ ಮಾಡಿದ ಕೋರೆಹಲ್ಲು, ಕೈಯಲ್ಲಿ ಕೋಲು ಮತ್ತು ಪನೆ ತತ್ತರ, ಮುಖಕ್ಕೆ ಮಸಿ ಹಾಗೂ ಸುಣ್ಣದ ಬೊಟ್ಟು, ಕಣ್ಣಿಗೆ ಕನ್ನಡಕದ ರೀತಿಯಲ್ಲಿ ಹಗ್ಗದಿಂದ ಕಟ್ಟಿಕೊಳ್ಳಲಾದ ಕಪ್ಪು–ಬಿಳಿ ವೃತ್ತಗಳು. ಇವಿಷ್ಟು ಕಳೆಂಜ ವೇಷಧಾರಿಯ ವೇಷಭೂಷಣಗಳು.

ಇನ್ನು ಕನ್ನಿ ವೇಷಧಾರಿಯು ಕಳೆಂಜನೊಂದಿಗೆ ಕುಣಿಯುವ ನಲಿಕೆ ಹೆಣ್ಣು. ಸಾಮಾನ್ಯವಾಗಿ ಈ ವೇಷವನ್ನು ಎಳೆಯ ಹುಡುಗರು ಧರಿಸುತ್ತಾರೆ. ಮುಖಕ್ಕೆ ಅರದಾಳ, ಕಣ್ಣಿಗೆ ಕಾಡಿಗೆ ಮತ್ತು ಕೆಂಪು ಬೊಟ್ಟು, ಸೀರೆ–ರವಿಕೆ, ಕುತ್ತಿಗೆಗೆ ಹಾರ, ತುರುಬಿಗೆ ತೆಂಗಿನ ಎಳೆಯ ಗರಿಯಿಂದ ಮಾಡಿದ ರಾಕುಟಿ ಹೂವು, ಕೈಯಲ್ಲಿ ನೆಕ್ಕಿ ಸೊಪ್ಪು ಇವಿಷ್ಟು ಕನ್ನಿಯ ಉಡುಗೆ ತೊಡಿಕೆಗಳು. ತೆಂಬರೆಯನ್ನು ಬಡಿಯುತ್ತಾ ಕನ್ನಿಯು ಹಾಡು ಹಾಡುವಾಗ ತೆಂಬರೆಯ ಲಯಕ್ಕೆ ಅನುಗುಣವಾಗಿ

ಕಳೆಂಜ ದೊಡ್ಡ ದೊಡ್ಡ ಹೆಜ್ಜೆಗಳನ್ನಿಟ್ಟು ನಿಧಾನವಾಗಿ ಸುತ್ತು ತಿರುಗುತ್ತಾನೆ. ಕೈಯಲ್ಲಿ ಹಿಡಿದ ಪನೆ ತತ್ತರವನ್ನು ತಿರುಗಿಸುತ್ತ ಕೋಲೂರಿಕೊಂಡು ಹೆಜ್ಜೆ ಹಾಕುತ್ತಾನೆ. ಕನ್ನಿ ವೇಷಧಾರಿಯು ಸಹ ನಿಧಾನವಾಗಿ ಹುಡಿ ಹೆಜ್ಜೆ ಹಾಕುತ್ತಾ ಸಣ್ಣ ವೃತ್ತದಲ್ಲಿ ಕುಣಿಯುತ್ತಾಳೆ.

ಬಿರ್ಮೆರೆ ಮಾಣಿಲುವಿನಲ್ಲಿ ಇಬ್ಬರು ಕಲಾವಿದರಿದ್ದು ಇವರೂ ಸಹ ಸೊಂಟಕ್ಕೆ ಕಳೆಂಜ ವೇಷಧಾರಿಯಂತೆ ಎಳೆಯ ಗರಿಯ ಜಾಲರಿ, ಮೈಗೆ ಬಟ್ಟೆಯ ಬದಲಾಗಿ ಜೇಡಿ ಮಣ್ಣಿನಿಂದ ಚುಕ್ಕೆಗಳನ್ನು ಇಟ್ಟುಕೊಳ್ಳುತ್ತಾರೆ. ಮಣಿಕಟ್ಟು ಮತ್ತು ತೋಳಿಗೆ ಹೂವಿನ ದಂಡೆ, ಕೇಪುಳ ಬಳ್ಳಿಯನ್ನು ದುಂಡಾಗಿ ಸುತ್ತಿ ತಲೆಗಿಟ್ಟುಕೊಂಡು ಅದರ ಮೇಲೆ ತೇರೆ ಮರದ ತೊಗಟೆಯಿಂದ ತಯಾರಿಸಿದ 'ಮುಡಿ ಕಿರೀಟ', ಇದಕ್ಕೆ ಕಳೆಂಡಿ ಹೂವು, ಕೇಪುಳ ಹೂವು ಇಲ್ಲವೆ ಕೇದಗೆ ಅಲಂಕಾರ. ಮುಖಕ್ಕೆ ಬಿಳಿಯ ಬಣ್ಣ, ಮಸಿಯ ಮೀಸೆ, ನಾಮ, ಗಡ್ಡ, ಕಾಲಿಗೆ ಗೆಜ್ಜೆ, ಕಂಕುಳಲ್ಲಿ ದುಡಿ, ಕೈಯಲ್ಲಿ ಪನೆಪತ್ರ ಹಿಡಿದು ನಿಧಾನಗತಿಯಿಂದ ಇಬ್ಬರೂ ಕುಣಿಯುತ್ತಾರೆ. ಕುಣಿತದಲ್ಲಿ ಅಬ್ಬರ ಇರುವುದಿಲ್ಲ. ತಾವೇ ದುಡಿ ಬಾರಿಸಿಕೊಂಡು ಹಾಡು ಹೇಳುತ್ತಾರೆ. ಒಬ್ಬ ಹೇಳಿದ್ದನ್ನು ಮತ್ತೊಬ್ಬ ಪುನರುಚ್ಚರಿಸುತ್ತಾ ಹೋಗುತ್ತಾನೆ.

ಆಟಿಕಳೆಂಜ ವೇಷ ಧರಿಸಿ ಮನೆಯ ಬಾಗಿಲಿಗೆ ಬಂದವರಿಗೆ ಮನೆಯವರು ಒಂದು ಗೆರಸೆಯಲ್ಲಿ ಅಕ್ಕಿ, ತೆಂಗಿನಕಾಯಿ, ಹಣ, ಉಪ್ಪು, ಹುಳಿ, ಮೆಣಸು ನೀಡುತ್ತಾರೆ. ಗೆರಸೆಯನ್ನು ಹಿಂದಕ್ಕೆ ಕೊಡುವಾಗ ಎಲ್ಲಾ ವಸ್ತುಗಳನ್ನು ಸ್ವಲ್ಪ ಸ್ವಲ್ಪ ಉಳಿಸಿಕೊಡುತ್ತಾರೆ. ಇದನ್ನು ಮನೆಯವರು ಕಳೆಂಜನ ಪ್ರಸಾದ ಎಂದು ಸ್ವೀಕರಿಸುತ್ತಾರೆ.

ಆಟಿಕಳೆಂಜದ ಆಚರಣೆಯ ಕೊನೆಯ ದಿನ ಸಂಜೆ ಕಾಸರಕನ ಮರದ ಬುಡಕ್ಕೆ ಹೋಗಿ ಅಲ್ಲಿ ಸೊಂಟದ ತಿರಿ, ತಲೆಯ ಮುಡಿ, ಮೀಸೆ

ಗಡ್ಡೆ ಇವುಗಳನ್ನೆಲ್ಲಾ ತೆಗೆದು ಮರದ ಬುಡದಲ್ಲಿಟ್ಟು ಹದಿನಾರು ಕಳೆಂಡಿ ಎಲೆಗಳನ್ನು ತೆಗೆದು ಮರದ ಸುತ್ತಲೂ ಇರಿಸಿ ಅದರಲ್ಲಿ ಉಪ್ಪು ಹುಳಿ ಇಡುತ್ತಾರೆ. ಆಮೇಲೆ ಎಲ್ಲರೂ ಸ್ವಲ್ಪ ಅಕ್ಕಿಯನ್ನು ಕೈಯಲ್ಲಿ ಹಿಡಿದು ಮರಕ್ಕೆ ಮೂರು ಸುತ್ತು ಬಂದು ತೆಂಗಿನಕಾಯಿಯನ್ನು ಮರಕ್ಕೆ ಹೊಡೆದು ತೆಂಗಿನಕಾಯಿ ಹಾಗೂ ಕಡೆಂಜಿ ಎಲೆಗಳಲ್ಲಿ ಇರಿಸಿದ ಉಪ್ಪು, ಮೆಣಸು, ಹುಳಿಯನ್ನು ಹಂಚಿ ತಿನ್ನುತ್ತಾರೆ. ಇದಕ್ಕೆ 'ಮುಳಿಪ್ಪುನ' ಅಥವಾ 'ಪಿರಿಪ್ಪುನ' ಮಾಡುವುದು ಎಂದು ಕರೆಯುತ್ತಾರೆ.

ಕಂಗಿಲು ಕುಣಿತ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಮಂಗಳೂರು ತಾಲ್ಲೂಕುಗಳಲ್ಲಿ ವಾಸಿಸುವ ಮುಂಡಾಲ ಜನಾಂಗದವರು ಪ್ರತೀ ವರ್ಷ ಮಾರ್ಚ್ ತಿಂಗಳಿನಲ್ಲಿ ಹುನ್ನಿಮೆಯೆಂದು ತಮ್ಮ ಕುಲದೈವವಾದ ಕಡಗೇಶ್ವರಿಯ ಪ್ರೀತ್ಯರ್ಥವಾಗಿ ನಡೆಸುವ ಆರಾಧನಾ ಕುಣಿತವೇ ಕಂಗಿಲು ಕುಣಿತ. ಕಂಗ್ ಎಂದರೆ ತುಳುವಿನಲ್ಲಿ ಅಡಿಕೆ ಮರ ಎಂದರ್ಥ. ಕಂಗಿಲು ಕುಣಿತದ ಕಲಾವಿದರು ಅಡಿಕೆ ಮರದ ನಾರು ಮತ್ತು ಹಾಳೆಗಳ ವೇಷಭೂಷಣ ಧರಿಸಿ ಕುಣಿಯುವುದರಿಂದ ಈ ಹೆಸರು ಬಂದಿರಬಹುದು.

ಕಂಗಿಲು ಕುಣಿತಕ್ಕೆ ಮೊದಲು ಕಲಾವಿದರು ತಮ್ಮ ಕುಲದೈವವಾದ ಕಡಗೇಶ್ವರಿ ಅಥವಾ ಮಾರಿಯಮ್ಮನಿಗೆ ಪೂಜೆ ಸಲ್ಲಿಸಿ ಅನಂತರ ವೇಷಭೂಷಣಗಳನ್ನು ಧರಿಸುತ್ತಾರೆ. ಸಾಮಾನ್ಯವಾಗಿ ಐದರಿಮದ ಹದಿನಾಲ್ಕು ಮಂದಿ ಕಲಾವಿದರಿರುತ್ತಾರೆ.ಲುಂಗಿ ಉಟ್ಟು ಅಂಗಿ ಹಾಕಿಕೊಳ್ಳುತ್ತಾರೆ. ಲುಂಗಿಯ ಮೇಲೆ ಸೊಂಟಕ್ಕೆ ಮತ್ತು

ಕುತ್ತಿಗೆಗೆ ತೆಂಗಿನ ತಿರಿಯಿಂದ ತಯಾರಿಸಿದ ಜಾಲರಿಗಳನ್ನು ತೊಡುತ್ತಾರೆ. ಮುಖಕ್ಕೆ ಯಾವುದೇ ಬಗೆಯ ಬಣ್ಣಗಾರಿಕೆಯಾಗಲಿ, ಮುಖವರ್ಣಿಕೆಯಾಗಲಿ ಇರುವುದಿಲ್ಲ. ತಲೆಗೆ ಬಿಳಿಯ ಮುಂಡಾಸು ಧರಿಸುತ್ತಾರೆ. ಕೆಲವು ಕಡೆ ಅಡಿಕೆ ತಿರಿಯ ಜಾಲರಿಯನ್ನು ತಲೆಯ ಸುತ್ತ ಇಳಿಬಿಟ್ಟುಕೊಳ್ಳುವುದುಂಟು.



ಕಲಾವಿದರೆಲ್ಲಾ ವೃತ್ತಾಕಾರದಲ್ಲಿ ನಿಂತು ತಾಸೆ ಅಥವಾ ಡೋಲಿನ ಬಡಿತಕ್ಕನುಗುಣವಾಗಿ ಕುಣಿಯಲಾರಂಭಿಸುತ್ತಾರೆ. ನಾಲ್ಕು ಮಂದಿ ಹಾಡುಗಾರರು ಒಂದು ಪಾರ್ಶ್ವದಲ್ಲಿ ನಿಂತು ಕೈಯಲ್ಲಿ ಘಂಟಾಮಣಿಯನ್ನು ಹಿಡಿದುಕೊಂಡು ಹಾಡಿನ ಲಯಕ್ಕನುಗುವಾಗಿ ಬಾರಿಸುತ್ತಿರುತ್ತಾರೆ. ಕಲಾವಿದರ ಮಧ್ಯೆ ಸೊಂಟಕ್ಕೆ ಸಣ್ಣ ಕಪ್ಪು ಬಟ್ಟೆ ತುಂಡು ಧರಿಸಿ, ಮೈಗೆ ಕಪ್ಪು ಬಣ್ಣ ಬಳಿದುಕೊಂಡು, ಹೂಮಾಲೆ ತೊಟ್ಟು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ತಲೆಗೆ ಅಡಿಕೆ ಟೊಪ್ಪಿಗೆ ಧರಿಸಿ

ಕುಣಿಯುವ ಕೊರಗನ ವೇಷವಿರುತ್ತದೆ. ಈತನು ಕುಣಿಯುವವರ ಮಧ್ಯೆ ಅಡ್ಡಾದಿಡ್ಡಿಯಾಗಿ ಕುಣಿಯುತ್ತ, ವಿಚಿತ್ರ ಹಾವಭಾವಗಳನ್ನು ಪ್ರದರ್ಶಿಸುತ್ತ ನೋಡುವವರಿಗೆ ಮನರಂಜನರ ನೀಡುತ್ತಾನೆ. ಕುಣಿಯವವರು ಹಾಡು ಹೇಳುವುದಿಲ್ಲ, ಬದಲಾಗಿ 'ಕೂ' ಎಂದು ಕೂಗು ಹಾಕುತ್ತಿರುತ್ತಾರೆ. ಹಿಮ್ಮೇಳದ ಡೋಲು, ತಾಸೆಯ ಬಡಿತದ ವೇಗ ಹೆಚ್ಚಾದಂತೆಲ್ಲ ಕುಣಿತದವರ ಪದಗತಿಯೂ ಸಹ ತೀವ್ರಗೊಳ್ಳುತ್ತಾ ಹೋಗುತ್ತದೆ. ಮಂಗಳೂರು ತಾಲ್ಲೂಕಿನಲ್ಲಿ ಗಮಡಸರು,ಉಡುಪಿ ತಾಲ್ಲೂಕಿನಲ್ಲಿ ಹೆಂಗಸರು ಕಂಗಿಲು ಕುಣಿತ ಪ್ರದರ್ಶಿಸುತ್ತಾರೆ. ಊರಿಗೆ ಬಮದ ಮಾರಿ, ಜನ-ಜಾನುವಾರುಗಳಿಗೆ ತಗಲುವ ಪೀಡೆ, ಬೆಳೆಗಳಿಗೆ ಬಂದೊದಗುವ ರೋಗ-ರುಜಿನಗಳು ಪರಿಹಾರವಾಗಲೆಂಬ ಆಶಯವು ಈ ಕುಣಿತದಲ್ಲಿ ಅಂತರ್ಗತವಾಗಿದೆ.

ಸಿಂಹ ನೃತ್ಯ

ಸಿಂಹ ನೃತ್ಯದ ಮೂಲ ಉದ್ದೇಶ ಮನರಂಜನೆ. ಕಾಡಿನ ರಾಜನಾದ ಸಿಂಹದ ಗಾಭೀರ್ಯ, ದರ್ಪ, ಬೇಟೆ ಆಡುವ ಹೊಂಚು, ಆಕ್ರಮಣದ ವೈಖರಿ ಇತ್ಯಾದಿಗಳೆಲ್ಲವನ್ನು ಸವಿವರವಾಗಿ ಸಾದರಪಡಿಸುವ ಕುಣಿತವಿದು. ಸಿಂಹ ನೃತ್ಯವನ್ನು ಪರದರ್ಶಿಸುವ ಕಲಾವಿದರು ಸಿಂಹದ ವೇಷವನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸುತ್ತಾರೆ. ಸಿಂಹದ ಹೊರ ಮೈನ ಅಂದ-ಚಂದ- ಶರೀರದ ವಿನ್ಯಾಸ ಎಲ್ಲವೂ ಸ್ಪಷ್ಟವಾಗಿ ಗೋಚರಿಸುವಂತೆ ಹೋಲುವ ಅಂಗಿಯನ್ನು ಶರೀರಕ್ಕೆ ತೊಟ್ಟುಕೊಳ್ಳುತ್ತಾರೆ. ಸಿಂಹದ ಮುಖದ ಉಬ್ಬು-ತಗ್ಗುಗಳಿಗೆ ತಕ್ಕಂತೆ ಬಣ್ಣದಲ್ಲಿ ಅದ್ದಿದ ಹತ್ತಿಯಿಂದ ಮುಖವರ್ಣಿಕೆಯ ಅಲಂಕಾರ ಮಾಡುತ್ತಾರೆ. ಹಲ್ಲು, ಉಗುರು, ಮೀಸೆಗಳನ್ನು ಕೃತಕವಾಗಿ ಧರಿಸುತ್ತಾರೆ.

ಕುಣಿತಕ್ಕೆ ಹಿನ್ನೆಲೆಯಾಗಿ ಡೋಲು, ನಗಾರಿ, ಮೃದಂಗ, ಚಂಡೆ, ತಾಳ, ಶ್ರುತಿ ವಾದ್ಯಗಳನ್ನು ಬಳಸುತ್ತಾರೆ, ಕಾಡಿನ ವಾತಾವರಣ ಮತ್ತು ಸಿಂಹದ ಗರ್ಜನೆಯನ್ನು ಸೃಷ್ಟಿಸಿ ನೋಡುಗರಲ್ಲಿ ನಿಜವೇನೋ ಎನಿಸುವಷ್ಟರ ಮಟ್ಟಿಗೆ ಡೋಲು, ನಗಾರಿಗಳು ಅಬ್ಬರಗೈಯುತ್ತವೆ. ಸಿಂಹದ ಕುಣಿತಕ್ಕೆ ಮೃದಂಗ, ತಾಳ-ಶ್ರುತಿ, ಚಂಡೆಗಳು ಗತ್ತುಗಳನ್ನು ಒದಗಿಸುತ್ತವೆ.



ಸಿಂಹ ನೃತ್ಯ ಪ್ರದರ್ಶಿಸುವ ಕಲಾವಿದರು ಅರಣ್ಯ ವೇದಿಕೆಯನ್ನು ನಿರ್ಮಾಣ ಮಾಡಿರುತ್ತಾರೆ. ಕಾಡಿನ ಭಯಾನಕತೆ, ನೀರವ ಮೌನದ ನಡುವೆ ಗಂಭೀರ ಹೆಜ್ಜೆಗಳನ್ನಿಡುತ್ತಾ ಸಿಂಹವು ವೇದಿಕೆ ಪ್ರವೇಶಿಸುತ್ತದೆ. ಆಯಾಸ ಪರಿಹಾರದ ವಿವಿಧ ಭಂಗಿಗಳು, ಬೇಟೆಯ ವಾಸನೆ ಹಿಡುಯುವುದು, ಸದ್ದಿಗೆ ಕಿವಿ ನಿಮಿರಿಸುವುದು, ಹೊಂಚು ಹಾಕುವುದು, ದಿಣ್ಣೆಯಿಂದ ದಿಣ್ಣೆಗೆ ನೆಗೆಯುವುದು, ಬೇಟೆಯ ಮೇಲೆ

ಹಾರಿ ಆಕ್ರಮಿಸುವುದು, ಬೇಟೆಯನ್ನು ತಿಂದ ನಂತರ ನಾಲಿಗೆಯಿಂದ ಕೈ ಬಾಯಿ ಒರೆಸಿಕೊಳ್ಳುವುದು-ಇವೆಲ್ಲವನ್ನು ನುರಿತ ಕಲಾವಿದರು ಅತ್ಯಂತ ನೈಜವಾಗಿ ಪ್ರದರ್ಶಿಸುತ್ತಾರೆ. ಸಿಂಹದ ರೌದ್ರತೆಯನ್ನು ಕೇವಲ ಕಣ್ಣುಗಳಲ್ಲೇ ಕಟ್ಟಿಕೊಡುವ ಉತ್ತರ ಕನ್ನಡ ಜಿಲ್ಲೆ ಕರ್ಕಿಯ ಕೃಷ್ಣ ಹಾಸ್ಯಗಾರರು ಕರಾವಳಿಯಲ್ಲಿ ಸಿಂಹ ವೇಷದ ಕಲಾವಿದರನ್ನು ಹುಟ್ಟುಹಾಕಿದ್ದಾರೆ.

ಕೊರಗರ ಕುಣಿತ

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಕಂಡುಬರುವ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಕೊರಗರು ನವರಾತ್ರಿ ಕಾಲದಲ್ಲಿ ತಮ್ಮ ಕುಣಿತವನ್ನು ಪ್ರದರ್ಶಿಸುತ್ತಾರೆ. ಸುಮಾರು ಎಂಟು ಹತ್ತು ಮಂದಿ



ಕಲಾವಿದರು ಸೊಂಟಕ್ಕೆ ತುಂಡು ಬಟ್ಟೆ ಧರಿಸಿ ಮೈಗೆಲ್ಲಾ ಮಸಿ ಬಳಿದುಕೊಳ್ಳುತ್ತಾರೆ. ಸೊಂಟಕ್ಕೆ ಸುತ್ತಿದ ಬಟ್ಟೆಯು ಸಹ ಕಪ್ಪು ಬಣ್ಣದ್ದೇ ಆಗಿರುತ್ತದೆ. ತಲೆಗೆ ಕಂಗಿನ ಮರದ ಹಾಳೆಯಿಂದ ತಯಾರಿಸಿದ ಮುಟ್ಟಾಳೆ ಎಂದು ಕರೆಯುವ ಟೊಪ್ಪಿಯನ್ನು ಧರಿಸಿ, ಕಾಲಿಗೆ ಗೆಜ್ಜೆಕಟ್ಟಿ ಕೈಯಲ್ಲಿ ಕೊಳಲು ಹಿಡಿದು ತಾಸೆ, ತೆಂಬರೆ, ಡೋಲು, ವಾದ್ಯಗಳ ಗತ್ತಿಗೆ ತಕ್ಕಂತೆ ಪಾಡ್ದನಗಳನ್ನು ಹಾಡುತ್ತಾ ಕುಣಿಯುತ್ತಾರೆ. ಕೊರಗರ ಕುಣಿತಕ್ಕೆ ಯಾವುದೇ ನಿರ್ದಿಷ್ಟತೆ ಇಲ್ಲ. ವಾದ್ಯದ ಸದ್ದಿಗೆ ತಕ್ಕಂತೆ ಮೈಕೈ ಕುಣಿಸುವುದು, ಬಾಗುವುದು ಬಳುಕುವುದು, ಹಿಂದಕ್ಕೆ ಮುಂದಕ್ಕೆ ಹೆಜ್ಜೆ ಹಾಕುವುದು, ಸುತ್ತು ಹೊಡೆಯುವುದು ಇತ್ಯಾದಿಗಳನ್ನು ಮಾಡುತ್ತಾರೆ. ಕೊರಗರ ಕುಣಿತ ನೋಡುವವರು ಡೋಲಿನ ಬಡಿತದಿಂದ ಸ್ಫೂರ್ತಿಗೊಂಡು ತಾವೂ ಕೊರಗರೊಡನೆ ಸೇರಿ ಕುಣಿಯುವುದುಂಟು. ಊರಿನ ಪ್ರತಿಯೊಂದು ಮನೆಯ ಅಂಗಳದಲ್ಲಿಯೂ ಕೊರಗರು ಕುಣಿತ ಕುಣಿದು ಮನೆಯವರಿಂದ ದುಡ್ಡು ದಿನಸಿ ಪಡೆಯುವುದುಂಟು.

ಗುಮಟೆ ಕುಣಿತ

ಕರಾವಳಿ ಕರ್ನಾಟಕದ ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಬದುಕಿನಲ್ಲಿ ಗುಮಟೆ ವಾದ್ಯಕ್ಕೆ ಅಗ್ರಸ್ಥಾನವಿದೆ. ಗುಮಟೆ ಅಥವಾ ಗುಮಟೆ ವಾದ್ಯವನ್ನು ಮಣ್ಣಿನಿಂದ ತಯಾರಿಸುತ್ತಾರೆ. ಸುಮಾರು ೩೦ ರಿಂದ ೩೨ ಇಂಚುಗಳಷ್ಟು ಉದ್ದವಿರುವ ಹೂಜಿಯಾಕಾರದ ಗುಮಟೆಯ ಒಂದು ಬದಿಯ ಬಾಯಿ ಕಿರಿದಾಗಿರುತ್ತದೆ. ಚನ್ನಾಗಿ ಹದಗೊಳಿಸಿದ ಉಡದ ಚರ್ಮ ಇಲ್ಲವೆ ಮೇಕೆಯ ಚರ್ಮವನ್ನು ಅಗಲವಾದ ಬಾಯಿಗೆ ಬಿಗಿದಿರುತ್ತಾರೆ. ಕಿರಿದಾದ ಬಾಯಿ ತೆರೆದಿರುತ್ತದೆ.

ಸುಗ್ಗಿ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮರಾಠಿ ನಾಯ್ಕರು ಗುಮಟೆ, ತಾಳ ಬಾರಿಸಿಕೊಂಡು ಹಾಡುತ್ತಾ ಮನೆ ಮನೆಗಳ ಬಳಿ



ಹೋಗಿ ಕುಣಿತ ನಡೆಸುತ್ತಾರೆ. ಈ ಕುಣಿತದಲ್ಲಿ ಆಂಗಿಕ ಚಲನೆಗಳೇನೂ ಇಲ್ಲವಾದರೂ ಗುಮಟೆ ಬಾರಿಸುವ ವ್ಯಕ್ತಿ ಮಾತ್ರ ತಾಳಕ್ಕೆ ತಕ್ಕಂತೆ ಕುಣಿಯುತ್ತಾನೆ. ಹಾಡಿನ ಲಯ, ಗುಮಟೆಯ ಬಡಿತ, ಪದಗತಿ ಮೂರೂ ಒಂದಕ್ಕೊಂದು ಪೂರಕವಾಗಿರುತ್ತವೆ. ಕಲಾವಿದರ ವೇಷಭೂಷಣಗಳು ತೀರಾ ಸರಳವಾಗಿರುತ್ತವೆ. ಮನರಂಜನೆಯೇ ಕುಣಿತದ ಉದ್ದೇಶವಾಗಿರುತ್ತದೆ.

ಗೊಂಡರ ಹೋಳಿ ಕುಣಿತ

ಉತ್ತರ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಂಡುಬರುವ ಗೊಂಡರು ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಹೋಳಿ ಕುಣಿತವನ್ನು ಗೊಂಡರು ಹೋಳಿ ಹಳಬು ಎಂದು ಕರೆಯುತ್ತಾರೆ. ಈ ಕುಣಿತವು ಗೊಂಡರಿಗೇ ವಿಶಿಷ್ಟವಾದ ಕಲೆ.



ಕುಣಿತದಲ್ಲಿ ಸುಮಾರು ೧೪ ಕಲಾವಿದರಿದ್ದು ಪ್ರತಿಯೊಬ್ಬರೂ ಬಣ್ಣದ ಧೋತರ, ಕೆಂಪು ಪೇಟ, ಹೂವಿನ ತಲೆಯುಡಿಗೆ, ಬೆಳ್ಳಿಯ ಉಡಿದಾರ, ಕಾಲು ಕಡಗ ಧರಿಸಿ ಕೈಯಲ್ಲಿ ಢಕ್ಕೆ ಹಿಡಿದಿರುತ್ತಾರೆ. ಇಬ್ಬರು ಕಾಮಣ್ಣನ ವೇಷಧಾರಿಗಳಿದ್ದು, ಕೆಂಪು-ಬಿಳಿಯ ಪಟ್ಟೆಗಳನ್ನುಳ್ಳ ಕಡುನೀಲಿ ಬಣ್ಣದ ಉದ್ದನೆಯ ನಿಲುವಂಗಿ ಧರಿಸಿರುತ್ತಾರೆ. ನಿಲುವಂಗಿಯ ಮುಖಭಾಗಕ್ಕೆ ಬಟ್ಟೆಯಿಂದ ತಯಾರಿಸಿದ ಆನೆಯ ಮುಖವಾಡವನ್ನು ಸೇರಿಸಿ ಹೊಲಿದಿರುತ್ತಾರೆ. ಕೈಯಲ್ಲಿ ಕಾಮನ ಜಲ್ಲಿ ಎಂದು ಕರೆಯುವ ಉದ್ದನೆಯ ಮರದ ಕೊಂಬೆಯನ್ನು ಹಿಡಿದಿರುತ್ತಾರೆ.

ಶಿವರಾತ್ರಿಯಂದು ಈ ಕುಣಿತವು ನಡೆಯುತ್ತದೆ. ಈ ಕುಣಿತದಲ್ಲಿ ಯಾವುದೇ ಹಾಡುಗಳಿಲ್ಲ. ಢಕ್ಕೆ ವಾದ್ಯವನ್ನು ಬಾರಿಸಿಕೊಂಡು ದೇವಾಲಯದ ಎದುರು ಬೆಂಕಿ ಹಾಕಿಕೊಂಡು ಅದರ ಸುತ್ತ


'ದುಮ್ಮಿಸಾಲೆ' ಎಂದು ಹೇಳುತ್ತಾ ಕುಣಿಯುತ್ತಾರೆ. ಎರಡು ರಾತ್ರಿ ಒಂದು ಹಗಲು ಕುಣಿತ ನಡೆಯುತ್ತದೆ.

ಹೋಳಿ ಹಬ್ಬದಲ್ಲಿ ಕಾಮನನ್ನು ಸುಡುವ ಸಂಪ್ರದಾಯವು ಗೊಂಡರಲ್ಲಿ ಭಿನ್ನವಾಗಿದೆ. ಕಟ್ಟಿಗೆಗೆ ಹುಲ್ಲು ಸುತ್ತಿ ಮನುಷ್ಯನ ಆಕೃತಿ ಮಾಡಿ ಮೆರವಣಿಗೆ ಹೊರಡುತ್ತಾರೆ. ಗೊಂಬೆ ಮೆರವಣಿಗೆಯನ್ನು ಹಳಬನನ್ನು ಎಬ್ಬಿಸುವುದು ಎನ್ನುತ್ತಾರೆ. ಹಳಬನನ್ನು ಎಬ್ಬಿಸುವುದು ಎಂದರೆ ಹಳಬನನ್ನು ಸುಟ್ಟು, ಹೊಸಬನನ್ನು ಬರಮಾಡಿಕೊಳ್ಳುವುದು. ಹಳಬು ಸುಡುವುದು ಎಂದರೆ ಕಾಮನನ್ನು ಸುಟ್ಟು ನವಸೃಷ್ಟಿಗೆ ದಾರಿ ಮಾಡಿಕೊಡುವುದರ ಸಂಕೇತ.

ತಾರ್ಲೆ ಕುಣಿತ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ, ಗೋಕರ್ಣ, ಅಂಕೋಲಾ, ಕಾರವಾರ ಮುಂತಾದ ಭಾಗಗಳಲ್ಲಿ ವಾಸಿಸುವ ಹಾಲಕ್ಕಿ ಒಕ್ಕಲಿಗರ ಹೆಣ್ಣು ಮಕ್ಕಳು ಮಳೆ ಬೆಳೆಯ ಸಮೃದ್ಧಿಗಾಗಿ ತಾರ್ಲೆ ಕುಣಿತವನ್ನು ಪ್ರದರ್ಶಿಸುತ್ತಾರೆ.

ಜಡೆ ಹೆಣೆದು ಎತ್ತಿ ಕಟ್ಟಿದ ತುರುಬಿಗೆ ಬಣ್ಣದ ಹೂವು, ಕುಪ್ಪಸವಿಲ್ಲದ ಎದೆಗೆ ಇಳಿಬಿಟ್ಟ ಬಣ್ಣಬಣ್ಣದ ಹತ್ತಾರು ಮಣಿಸರಗಳ ಮಾಲೆ, ತೋಳುಗಳಿಗೆ ತೋಳುಬಂದಿ, ಮುಂಗೈಗೆ ಬೆಳ್ಳಿ ಕಡಗ, ಕಾಲಿಗೆ ಕಡಗ, ಕಿವಿಗೆ ಹತ್ತಕಡಕು, ಮೂಗಿಗೆ ಮೂಗುತಿ, ಹಣೆಗೆ ಕೆಂಪು ತಿಲಕ, ಇವಿಷ್ಟು ಹಾಲಕ್ಕಿ ಹೆಣ್ಣುಮಕ್ಕಳ ವರ್ಣರಂಜಿತ ವೇಷಭೂಷಣಗಳು. ನಿತ್ಯದ ಉಡುಗೆಯಾದ ಬಣ್ಣದ ಸೀರೆಯ ನಿರಿಗೆಯನ್ನು ಹಿಂದಕ್ಕೆ ಬೆಟ್ಟು ವರ್ತುಲಾಕಾರವಾಗಿ ಒಬ್ಬರಿಗೊಬ್ಬರು ಕೈ ಜೋಡಿಸಿ ನಿಂತು ಮಂಡಲಾಕಾರದಲ್ಲಿ ಸುತ್ತುತ್ತಾ, ಹಿಂದಕ್ಕೆ ಮುಂದಕ್ಕೆ ಬಾಗುತ್ತಾ ಬಳುಕುತ್ತಾ ಕುಣಿಯುತ್ತಾರೆ. ಹಾಡುಗಾರ್ತಿಯೊಬ್ಬಳು ಹಾಡಿನ




ಮೊದಲ ಸೊಲ್ಲು ಹೇಳುತ್ತಾಳೆ. ಕೂಡಲೇ ಉಳಿದವರು ಮುಂದಕ್ಕೆ ಹಾರಿ, ಬಾಗಿ ಪುನಃ ಹಿಂದಕ್ಕೆ ಜೀಕಿ ನಿಂತು ತಾರ್ಲೆ ಎಂದು ಸಾಮೂಹಿಕವಾಗಿ ಹೇಳುತ್ತಾರೆ.

ತಾರ್ಲೆ ಕುಣಿತದಲ್ಲಿ ಮಳೆ ಬಂದು ಬರ ಬಯಲಾಗುತ್ತದೆಂಬ ನಂಬಿಕೆ ಇದೆ. ಹಿಂದೆ ಮಳೆ ಬೀಳುವವರೆಗೂ ಎಡೆಬಿಡದೆ ಸರದಿಯಲ್ಲಿ ತಾರ್ಲೆ ಕುಣಿಯುತ್ತಿದ್ದರಂತೆ. ತಾರ್ಲೆ ಕುಣಿತವು ಫಲವಂತಿಕೆಯ ಆಚರಣೆಯ ಸಂಕೇತವಾಗಿದೆ. ಈ ಕುಣಿತದ ಸಂದರ್ಭದಲ್ಲಿ 'ಅಣುಕು ಮದುವೆ ಮಾಡುವುದು', 'ಬಿದಿರ ಹಿಂಡು ನಡುವೆ' ಎಂಬ ಎರಡು ಆಚರಣೆಗಳನ್ನು ಆಚರಿಸುವುದುಂಟು.

ನಾಗಮಂಡಲ

ಕರಾವಳಿ ಕರ್ನಾಟಕದಲ್ಲಿ ಸಾಮಾನ್ಯವಾಗಿ ಕಂಡುಬರುವ ನಾಗಾರಾಧನೆಯ ಪ್ರಧಾನ ಪ್ರಕಾರವೇ ನಾಗಮಂಡಲ. ಕುಣಿತವೇ ಪ್ರಧಾನವಗಿರುವ ಸರ್ಪ ಸಂಬಂಧಿಯಾದ ಆಚರಣೆ. ಈ ಪ್ರದರ್ಶನ ಕ್ರಿಯೆಯಲ್ಲಿ ಪುರೋಹಿತ, ನಾಗಪಾತ್ರಿ, ವೈದ್ಯರೆಂದು ಕರೆಸಿಕೊಳ್ಳುವ ನರ್ತಕರಿರುತ್ತಾರೆ. ಹೋಮ, ಹವನ, ಆಶ್ಲೇಷಬಲಿ, ಗಣ ಹೋಮ ಇತ್ಯಾದಿಗಳು ಈ ಆಚರಣೆಯಲ್ಲಿರುವುದರಿಂದ ಇದೊಂದು ತಾಂತ್ರಿಕ ವಿಧಿ. ನಾಗಮಂಡಲ ಪ್ರದರ್ಶನವನ್ನು ನಿರ್ವಹಿಸುವವರು ವೈದಿಕರಾದರೂ ಸಹ ಇದನ್ನು ಆಚರಿಸುವವರು ಬಹುತೇಕ ಕೆಳವರ್ಗಗಳಿಗೆ ಸೇರಿದ ಸಮುದಾಯಗಳು.



ನಾಗಮಂಡಲದ ಪ್ರಮಾಣಕ್ಕೆ ಅನುಗುಣವಾಗಿ ಎತ್ತರದ ವೇದಿಕೆಯನ್ನು ಸಿದ್ಧಪಡಿಸುತ್ತಾರೆ. ಮಂಡಲ ಸೇವೆಯನ್ನು ನಡೆಸುವ

ಪ್ರದೇಶವು ಸಾಮಾನ್ಯವಾಗಿ ವಿಶಾಲವಾದ ಗದ್ದೆಯಾಗಿರುತ್ತದೆ. ಈ ಪ್ರದೇಶವನ್ನು ಮಂಡಲ ಸೇವೆ ನಡೆಸುವ ಯಜಮಾನನು ಬ್ರಾಹ್ಮಣ ಪುರೋಹಿತರ ಸಮಕ್ಷಮದಲ್ಲಿ ಉತ್ತು, ಶುದ್ಧ ಮಾಡಿ 'ಶಾಕಾ ಸಂಸ್ಕಾರ' ನಡೆಸುತ್ತಾನೆ. ಶಾಕಾ ಸಂಸ್ಕಾರ ಎಂದರೆ ಹಿಟ್ಟಿನ ನಾಗನ ಆಕೃತಿಗೆ ಸಂಸ್ಕಾರ ನಡೆಸುವುದು. ಅನಂತರ ವೇದಿಕೆಯನ್ನು ಆಲಂಕರಿಸುತ್ತಾರೆ. ಪಂಚವರ್ಣದ ಪುಡಿಯಿಂದ, ಹದಿನಾರು ಪವಿತ್ರ ಗಂಟುಗಳಿಂದ ಕೂಡಿದ ರುದ್ರ ರಮಣೀಯವಾದ ಸರ್ಪ ಮಂಡಲ ಚಿತ್ತರವನ್ನು ಬಿಡಿಸುತ್ತಾರೆ.

ಸಾಧಾರಣವಾಗಿ ನಾಗಮಂಡಲದ ಆಚರಣೆಯು ಒಂದು ಸೂರ್ಯೋದಯದಿಂದ ಮತ್ತೊಂದು ಸೂರ್ಯೋದಯದವರೆಗೂ ನಡೆಯುತ್ತದೆ. ಒಂದು ಹಗಲು, ಒಂದು ರಾತ್ರಿ ನಾಗಮಂಡಲದ ವಿಧಿಗಳು ಜರುಗುತ್ತವೆ. ನಾಗಬನದಲ್ಲಿ ನಾಗರಕಲ್ಲುಗಳಿಗೆ ಅಭಿಷೇಕವಾದ ನಂತರ ವಾದ್ಯಗಳ ಸದ್ದಿನಲ್ಲಿ ಮೆರವಣಿಗೆಯೊಂದಿಗೆ ಪುರೋಹಿತ, ನಾಗಪಾತ್ರಿ, ವೈದ್ಯರು ಮಂಡಲದ ವೇದಿಕೆಗೆ ಬರುತ್ತಾರೆ. ದರ್ಶನಪಾತ್ರಿಯು ನಾಗನನ್ನು ಸ್ಮರಿಸಿ ಕೈ ತುಂಬಾ ಹಿಂಗಾರದ ರಶಿಯನ್ನು ಹಿಡಿದು ನಿಲ್ಲುತ್ತಾನೆ. ಅಷ್ಟರಲ್ಲಿ ನಾಗಪಾತ್ರಿಗೆ ಆವೇಶ ಬಂದು ಕೈಯಲ್ಲಿದ್ದ ಹಿಂಗಾರದ ರಾಶಿಗೆ ನೀರು ಎರೆಯಿಸಿಕೊಂಡು ಮುಖ ಮೈಗೆಲ್ಲ ಹಿಂಗಾರವನ್ನು ಉಜ್ಜಿಕೊಳ್ಳುತ್ತಾರೆ. ಹಿಂಗಾರ ಎಂದರೆ ಅಡಿಕೆ ಇಲ್ಲವೆ ತೆಂಗಿನ ಹೊಂಬಾಳೆ ಎಂದರ್ಥ. ಹಿಂಗಾರದ ಕೆನೆ ಬಣ್ಣದ ಕಾಳುಗಳು ನಾಗಪಾತ್ರಿಯ ಮುಖ ಮೈಗೆಲ್ಲಾ ಅಂಟಿಕೊಂಡು, ನೋಡುವವರಿಗೆ ಹೆಡೆ ಎತ್ತಿದ ನಾಗನ ಉಗ್ರರೂಪವನ್ನು ನೆನಪಿಗೆ ತರುತ್ತದೆ. ನಾಗಪಾತ್ರಿಯು ಆವೇಶದಿಂದ ಥರಥರ ನಡುಗುತ್ತಾ ಕೊರಳನ್ನು ಹಿಂಭಾಗಕ್ಕೆ ಮುಂಭಾಗಕ್ಕೆ ಓಲಾಡಿಸುತ್ತಾ ಭುಸುಗುಟ್ಟುವ ಸರ್ಪದೋಪದಿಯಲ್ಲಿ ನಲಿದಾಡುತ್ತಾನೆ. ಅಷ್ಟರಲ್ಲಿ ಢಕ್ಕೆ ಬಾರಿಸುತ್ತಾ

ವೈದ್ಯರು ಮಂಡಲವನ್ನು ಪ್ರವೇಶಿಸುತ್ತಾರೆ.

ವೈದ್ಯರ ಮೇಳದಲ್ಲಿ ಅರ್ಧನಾರಿ ವೇಷ ತೊಟ್ಟ ವೈದ್ಯರೊಬ್ಬರು ಕೈಯಲ್ಲಿ ಕಂಚಿನ ಢಕ್ಕೆ (ಢಮರು) ಮತ್ತೊಬ್ಬರು ಮರದ ಢಕ್ಕೆ. ಇನ್ನೊಬ್ಬರು ತಾಳ ಹಿಡಿದು ನುಡಿಸಲು ಆರಂಭಿಸುತ್ತಾರೆ. ಹಿಮ್ಮೇಳದ ಹಾಡುಗಾರರು ಗಣಪತಿ, ಭೈರವ, ಅರ್ಧನಾರೀಶ್ವರ, ಬ್ರಹ್ಮ, ನಾಗ, ಯಕ್ಷಿ, ರಕ್ತೇಶ್ವರಿ ಮೊದಲಾದ ದೈವಗಳ ಹಾಡುಗಳನ್ನು ಹಾಡುತ್ತಿದ್ದಂತೆ, ಅರ್ಧನಾರಿ ವೇಷ ತೊಟ್ಟ ವೈದ್ಯರು ಕಂಚಿನ ಢಕ್ಕೆ ಬಾರಿಸುತ್ತಾ, ಅದೇ ಹಾಡನ್ನು ಪುನರಾವರ್ತನೆ ಮಾಡುತ್ತಾ ಮಂದಗತಿಯಿಂದ ಪ್ರಾರಂಭಿಸಿ ಕ್ರಮೇಣ ವೇಗವಾಗಿ ಹೆಜ್ಜೆ ಹಾಕುತ್ತಾ ಮಂಡಲಕ್ಕೆ ಪ್ರದಕ್ಷಿಣೆ ಬರುತ್ತಾರೆ. ಆಗ ನಾಗಪಾತ್ರಿಯೂ ಸಹ ವೈದ್ಯರೊಂದಿಗೆ ಹೆಜ್ಜೆ ಹಾಕುತ್ತಾ ವಿವಿಧ ಲಯಗತಿಗಳಲ್ಲಿ ಪ್ರದಕ್ಷಿಣೆ, ಅಪ್ರದಕ್ಷಿಣೆಯ ನಡೆಯಲ್ಲಿ ಕುಣಿಯುತ್ತಾರೆ. ವೈದ್ಯರ ಕುಣಿತದಲ್ಲಿ ಬಹುತೇಕ ಯಕ್ಷಗಾನದ ಕುಣಿತ-ಮಣಿತ, ಬಾಗು-ಬಳುಕುಗಳು ಕಂಡು ಬಂದರೆ ನಾಗಪಾತ್ರಿಯು ನಾಗನಂತೆ ಮೈಯನ್ನು ಬಾಗಿಸಿ, ಬಳುಕಿಸಿ, ನಲಿದಾಡಿ, ಒನೆದಾಡಿ ನಾಗನೃತ್ಯದ ನೆನಪನ್ನು ತರುತ್ತಾರೆ.

ನಾಗಮಂಡಲದ ಹಾಡುಗಳು ಸ್ತುತಿ ಗೀತೆಗಳು. ಇವುಗಳನ್ನು ಹಾಡುವ ಮೂಲಕ ಮತ್ತು ಕುಣಿತದ ಮೂಲಕ ನಾಗನನ್ನು ಸಂಪ್ರೀತಿಗೊಳಿಸುವುದೇ ಈ ಕಲಾ ಪ್ರದರ್ಶನದ ಮೂಲ ಉದ್ದೇಶವಾಗಿರುತ್ತದೆ. ಈ ಹೊತ್ತಿಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಳಿದುಬಂದಿರುವ ಅತ್ಯಂತ ಸುಂದರವು, ಕಲಾತ್ಮಕವೂ ಆದ ಆದಿಮ ಪ್ರದರ್ಶನ ಕಲೆ.

ರಚಿಸಲಾಗುವುದು. ಗದ್ದೆಗಳ ಬಯಲಿನಲ್ಲಿ ಚಪ್ಪರವೊಂದನ್ನು ನಿರ್ಮಿಸಿ ಅದರೊಳಗೆ ನಿಲದ ಮೇಲೆ ಹಳದಿ, ಕೆಂಪು, ಪಚ್ಚೆ, ಬಿಳಿ, ಕಪ್ಪು ಬಣ್ಣದ ಹುಡಿಯಿಂದ ಬೃಹತ್ತಾದ ನಾಗ ಅಥವಾ ಸರ್ಪವೊಂದರ ಚಿತ್ರವನ್ನು ಸುರುಳಿ ಸುರುಳಿಯಂತೆ ಚಿತ್ರ ವಿಚಿತ್ರವಾಗಿ ವೃತ್ತಾಕಾರದಲ್ಲಿ ಬಿಡಿಸಲಾಗುವುದು. ಈ ಮಂಡಲ ಸಾಧಾರಣ ೧೨ ಅಡಿ ವ್ಯಾಸವುಳ್ಳದ್ದು. ಮಧ್ಯಭಾಗದಲ್ಲಿ ಸರ್ಪದ ಏಳು ಹೆಡೆಗಳ ತಲೆಯ ವಿನ್ಯಾಸವಿರುತ್ತದೆ. ಮಂಡಲದ ಸುತ್ತ ಅಡಿಕೆ ಹೂವನ್ನು ದಂಡೆಯೋಪಾದಿಯಲ್ಲಿ ಸುರಿಯುವರು. ಅದು ಸುಮಾರು ಒಂದು ಅಡಿ ಎತ್ತರವಿರುತ್ತದೆ. ಸುತ್ತಲೂ ಎಂಟು ಕಡೆ, ಎಂಟು ಕಾಲು ದೀಪಗಳನ್ನು ಹಚ್ಚುವರು. ಹೀಗೆ ರಚಿಸಿದ ನಾಗಮಂಡಲದ ಸುತ್ತ ವೈದ್ಯ ನೃತ್ಯ ಜರುಗುತ್ತದೆ.

ಈ ನೃತ್ಯದಲ್ಲಿ ಭಾಗವಹಿಸುವವರು ೪ ಮಂದಿ ವೈದ್ಯರು. ಇವರಲ್ಲಿ ಇಬ್ಬರು ವೈದ್ಯರು ಮೇಲೆ ವಿವರಿಸಿದ ವೇಷವನ್ನು ಧರಿಸಿ ಸ್ತುತಿಗೀತೆಗಳನ್ನು ಹಾಡುತ್ತಾ ಢಕ್ಕೆಯನ್ನು ಬಡಿದುಕೊಂಡು ವೃತ್ತದ ಸುತ್ತ ಸುತ್ತುವರು. ಉಳಿದ ಇಬ್ಬರಿಗೆ ವೇಷವಿರುವುದಿಲ್ಲ. ಅವರು ಢಕ್ಕೆ ಬಡಿಯುತ್ತಾ ಮುಂದಿನವರನ್ನು ಹಿಂಬಾಲಿಸಿಕೊಂಡು ಕುಣಿಯುವರು. ಅಲ್ಲದೆ ಸಾಮಾನ್ಯ ಢಕ್ಕೆ ಬಡಿಯುವ ಕಾಲದಲ್ಲಿ ಒಬ್ಬನೇ ವೈದ್ಯ ವೇಷ ಧರಿಸಿ ಕುಣಿಯುವುದುಂಟು.

ವೈದ್ಯ ನೃತ್ಯ ನಾಗಮಂಡಲದ ಆರಾಧನೆಯ ಒಂದು ವಿಶಿಷ್ಟ ಭಾಗ. ಈ ಸಮಾರಂಭ ಅಥವಾ ಆಚರಣೆಯನ್ನು ನಡೆಸಲು ಬಹಳಷ್ಟು ಹಣ ಮತ್ತು ಜನರ ಸಹಕಾರ ಬೇಕು. ಈ ನೃತ್ಯದಲ್ಲಿ ಭಾಗವಹಿಸುವವರ ಚಲನವಲನಗಳು ವೈಶಿಷ್ಟ್ಯಪೂರ್ಣ ವಾಗಿರುತ್ತವೆ. ತಲೆಯ ಒಲೆತ, ಕತ್ತಿನ ಚಲನೆ, ಕೈಯ ಬಳುಕು, ದೇಹದ ಮಣಿತಗಳಲ್ಲಿ ಜಿಗಿತ

ಮುಂತಾದ ಚಟುವಟಿಕೆಗಳಿಂದ ನೋಡುಗರ ಮನಸ್ಸಿಗೆ ರಂಜನೆ ನೀಡುತ್ತದೆ.

ಪುಗಡಿ ಕುಣಿತ

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ ಮೊದಲಾದ ಕರಾವಳಿ ತೀರಗಳಲ್ಲಿ ವಾಸಿಸುವ ಕೊಮಾರಪಂತ, ಹರಿಕಂತ ಸಮುದಾಯಗಳಿಗೆ ಸೇರಿದ ಮೀನುಗಾರ ಹೆಂಗಸರಲ್ಲಿ ಪುಗಡಿ ಕುಣಿತವು ರೂಢಿಯಲ್ಲಿದೆ. ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿಯ ಸುತ್ತಮುತ್ತ ವಾಸಿಸುವ ಸಿದ್ಧಿ ಜನಾಂಗದ ಮಹಿಳೆಯರು ಈ ಕುಣಿತವನ್ನು ಸೊಗಸಾಗಿ ಪ್ರದರ್ಶಿಸುತ್ತಾರೆ. ನೀರು ತುಂಬಿರದ ಬರಿಗೊಡವನ್ನು ಕೈಗಳಲ್ಲಿ ಹಿಡಿದು ಬಾಯಿಯ ಬಳಿ ಇಟ್ಟುಕೊಂಡು ಪುವ್ ಪುವ್ ಎಂದು ಸದ್ದು ಮಾಡುತ್ತಾ ಕುಣಿಯುವುದೇ ಪುಗಡಿ ಕುಣಿತ. ಇದೊಂದು ಸೌಮ್ಯ ಹಾಗೂ ಪ್ರಭಾವಿ ಪ್ರದರ್ಶನ ಕಲೆ. ಎಷ್ಟು ಜನ ಮಹಿಳೆಯರಾದರೂ ಈ ಕುಣಿತದಲ್ಲಿ ಭಾಗವಹಿಸಬಹುದು. ಆದರೆ ಸಮ ಸಂಖ್ಯೆ ಇರಬೇಕು. ಹೆಣ್ಣು ಮಕ್ಕಳು ಎದುರುಬದುರಾಗಿ ನಿಂತು, ಕೈಗಳಲ್ಲಿ ಬರಿದಾದ ಕೊಡ ಹಿಡಿದು ಬಾಯಿಂದ ಊದುತ್ತಾ ಹಿಮ್ಮೇಳದ ಹಾಡು ಹಾಗೂ ಗುಮಟೆಯ ಮತ್ತು ಕೊಳಲಿನ ನಾದಕ್ಕೆ ತಕ್ಕಂತೆ ಬಾಗುತ್ತಾ, ಬಳುಕುತ್ತಾ ಕುಣಿಯುತ್ತಾರೆ. ಹಾಡು ಬದಲಾದಾಗ ಕುಣಿಯುವವರ ನರ್ತನದ ಹೆಜ್ಜೆಯ ಗತಿಯೂ ಬದಲಾಗುತ್ತದೆ.

ಕಲಾವಿದೆಯರ ದಿನನಿತ್ಯದ ಉಡುಪೇ ಕುಣಿತದ ವೇಷಭೂಷಣಗಳು. ಬಲಗೈಯಲ್ಲಿ ಕಂಚಿನ ಬಟ್ಟಲನ್ನು ಹಿಡಿದ ಒಬ್ಬಳು, ಎಡಗೈಯಲ್ಲಿ ಹಿಡಿದ ಚಿಕ್ಕಕೋಲಿನಿಂದ ಜಾಗಟೆಯಂತೆ ಬಾರಿಸುತ್ತಾ



ಸದ್ದು ಮಾಡಿದರೆ, ಮತ್ತೊಬ್ಬಳು ಮಗುಚಿ ಹಾಕಿದ ಮರಿಗೆಯ ಬೆನ್ನು ಭಾಗದ ಮೇಲೆ ಚಿಕ್ಕ ಕೋಲಿನಿಂದ ಉಜ್ಜುತ್ತಾ ಮತ್ತೊಂದು ರೀತಿಯ ನಾದವನ್ನು ಹೊಮ್ಮಿಸುತ್ತಾಳೆ. ಕುಣಿತದವರಿಗೆ ಈ ವಾದ್ಯದ ಗತಿಯೇ ಹಿಮ್ಮೇಳ. ಕುಣಿಯುವವರು ಕೈಯಲ್ಲಿ ಹಿಡಿದ ಕೊಡದ ಬಾಯಿಯನ್ನು ತಮ್ಮ ಬಾಯಿ ಬಳಿ ಹಿಡಿದುಕೊಂಡು 'ಘುವ್ ಘುವ್' ಎಂದು ಊದುತ್ತಾ ಲಯಬದ್ಧವಾಗಿ ತಾಳ ತಪ್ಪದಂತೆ ಕತ್ತು, ಸೊಂಟಗಳನ್ನು ಬಾಗಿಸಿ ಬಳುಕಿಸುತ್ತಾ ವಿವಿಧ ಭಂಗಿಗಳಲ್ಲಿ ಸ್ವಚ್ಛಂದವಾಗಿ ಕುಣಿಯುತ್ತಾರೆ. ಸಾಮೂಹಿಕವಾಗಿ ಕುಣಿಯುವುದಲ್ಲದೆ, ಏಕಾಂಗಿಯಾಗಿಯೂ ನರ್ತಿಸುವುದುಂಟು. ಕಲಾವಿದರುಗಳೆಲ್ಲರೂ ಕೈಕೈ ಹಿಡಿದುಕೊಂಡು ವೃತ್ತಾಕಾರವಾಗಿ, ಅರೆ ವರ್ತುಲಾಕಾರದಲ್ಲಿ ಹಾಡು ಹೇಳುತ್ತಾ ಕುಣಿಯುವರು. ಗುಮಟೆ, ತಾಸಮಾರು, ತಾಳ ಹಾಗೂ ತೆಂಬರೆ ವಾದ್ಯಗಳು ಕುಣಿತಕ್ಕೆ ಹಿಮ್ಮೇಳವನ್ನು ಒದಗಿಸುತ್ತವೆ.

ಕೊಂಕಣಿ ಸಂಪ್ರದಾಯಕ್ಕೆ ಸೇರಿದ ಕೊಡ ಮತ್ತು ಹಾಲಕ್ಕಿ ಒಕ್ಕಲಿಗರ ಸಂಪ್ರದಾಯದ ಗುಮಟೆ ಒಟ್ಟಾಗಿ ಸೇರಿರುವುದು ಈ ಕುಣಿತದ ವಿಶೇಷ. ಕೊಡವನ್ನು ಊದುವ ಸದ್ದಿನ ಜತೆಗೆ ಗುಮಟೆಯ ಲಯಬದ್ಧ ನಾದವೂ ಸೇರಿ ಕುಣಿತಕ್ಕೆ ಸುಮಧುರವಾದ ಹಿನ್ನೆಲೆಯನ್ನು ನೀಡುತ್ತದೆ

ಭೂತಾರಾಧನೆ

ಭೂತರಾಧನೆಯು ತುಳುನಾಡಿನ ಪ್ರಾಚೀನ ಧಾರ್ಮಿಕ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಈ ಸಂಪ್ರದಾಯವು ಮೊಹೆಂಜೊದಾರೊ ಸಂಸ್ಕೃತಿಯಲ್ಲೇ ಅಡಕವಾಗಿತ್ತೆಂದು ಇತಿಹಾಸಕಾರ ಫಾದರ್ ಹೆರಾಸ್ ಅಭಿಪ್ರಾಯಪಟ್ಟಿದ್ದಾರೆ. ಭೂತಾರಾಧನೆಗೂ ಬೇಸಾಯಕ್ಕೂ ಸಂಬಂಧವಿದೆ. ಭೂತಾರಾಧನೆಯಲ್ಲಿ ಬಳಸುವ ಭತ್ತ, ಅಕ್ಕಿ, ತೆಂಗಿನಕಾಯಿ, ಅಡಿಕೆ, ತೆಂಗಿನಗರಿ ಇವೆಲ್ಲಾ ಬೇಸಾಯಕ್ಕೆ ಸಂಬಂಧಿಸಿದ ಸಾಮಗ್ರಿಗಳು. ಮಳೆ ಬಾರದಿದ್ದರೆ, ಭತ್ತದ ಪೈರಿಗೆ ಕೀಟಗಳ ತೊಂದರೆಯಾದರೆ, ಜಾನುವಾರು ಕಳೆದು ಹೋದರೆ, ಅಡಿಕೆ ತೆಂಗಿನಕಾಯಿಗಳು ಕಳುವಾದರೆ ಜನಸಾಮಾನ್ಯರು ಹರಕೆ ಹೇಳುವುದು ಭೂತಗಳಿಗೆ.

ಸಾಮಾನ್ಯವಾಗಿ ಭೂತ ವೇಷದ ಕುಣಿತವನ್ನು ಒಳಗೊಂಡ ಆರಾಧನೆಗೆ 'ನೇಮ' ಅಥವಾ 'ಕೋಲ' ಎನ್ನುತ್ತಾರೆ. ಗ್ರಾಮಸ್ಥರು ಮಾಡಿಸುವ ನೇಮವಾದರೆ ಮೊದಲು ಪುರೋಹಿತರು ದಿನ ನಿರ್ಣಯ ಮಾಡಬೇಕು. ಭೂತದ ವೇಷ ಹಾಕುವವನು ಮೊದಲು ಮುಖಕ್ಕೆ ಹಳದಿ ಬಣ್ಣ ಬಳಿಯುವುದು ಮುಂತಾದ ವಿನ್ಯಾಸಗಳನ್ನು ಮಾಡಿಕೊಳ್ಳುತ್ತಾನೆ. ಕೆಂಪು ಬಣ್ಣದ ಅಂಗಿ, ಚಲ್ಲಣಗಳನ್ನು ಧರಿಸಿ

ತಲೆಗೆ ಬೆಳ್ಳಿ ಅಥವಾ ಚಿನ್ನದ ತಲೆಯಣ್ಣಿ ಮತ್ತು ತಲೆಪಟವನ್ನು ಬಿಗಿಯುತ್ತಾನೆ. ಕೈಗಳಿಗೆ ಬೆಳ್ಳಿಯ ೪ ದಂಡೆಗಳನ್ನು ಕಿಸ್ಗಾರ ಹೂಗಳ ಮಾಲೆಯ ಮಧ್ಯೆ ಜೋಡಿಸುತ್ತಾನೆ. ಎಳೆಯ ತೆಂಗಿನ ಗರಿಗಳಿಂದ ಮಾಡಿರುವ ಮಾಲೆಯನ್ನು ಸೊಂಟಕ್ಕೆ ಬಿಗಿಯುತ್ತಾನೆ. ಕಾಲಿಗೆ ಹಾಳೆಯನ್ನು ಬಿಗಿದು ಅದರ ಮೇಲೆ ಗೆಜ್ಜೆಯಂಥ 'ಗಗ್ಗರ' ಎಂದು ಕಡಗಗಳನ್ನು ಸಿಕ್ಕಿಸಿಕೊಳ್ಳುತ್ತಾನೆ. 'ಗಗ್ಗರ' ಇಟ್ಟೊಡನೆಯೇ ಆವೇಶ ಬಂದು ನಡುಗತೊಡಗುತ್ತಾನೆ. ದೀವಟಿಗೆಯಿಂದ ಎದೆಗೆ ಬೆಂಕಿಯಿಟ್ಟುಕೊಳ್ಳುತ್ತಾನೆ. ಇದಕ್ಕೆ ವಾಲಗ ಬ್ಯಾಂಡುಗಳ ಹಿಮ್ಮೇಳ ಇರುತ್ತದೆ. ಇದು ಅಬ್ಬರದ ಕಾರ್ಯಕ್ರಮ. ಅರ್ಧ ಗಂಟೆಯ ನಂತರ ಎಳನೀರು ಕುಡಿದು ಸ್ವಲ್ಪ ವಿಶ್ರಾಂತಿ. ಎರಡನೆಯ ಭಾಗದಲ್ಲಿ ವಿಶೇಷ ಅಬ್ಬರವಿಲ್ಲ. ಒಂದು ಕೈಯಲ್ಲಿ ಗಂಟೆ ಇನ್ನೊಂದು ಕೈಯಲ್ಲಿ ಖಡ್ಗ ಇರುತ್ತದೆ. ಕೆಲವೊಮ್ಮೆ ಭೂತಗಳು ಆವೇಶ ಬಂದು ನಡುಗಿ ಸ್ಮೃತಿ ತಪ್ಪುವುದು ಅಪರೂಪವಲ್ಲ. ಕ್ಷಣಕಾಲವಾದರೂ ವೇಷಧಾರಿ ಮತ್ತು ಪಾತ್ರಿಗಳು ತಮ್ಮನ್ನು ತಾವು ಮರೆಯುತ್ತಾರೆ. ಇಂಥ ಅತಿಮಾನುಷ ಅಂಶವೆ ಜನರಲ್ಲಿ ಭೂತಾರಾಧನೆಯ ಆಸಕ್ತಿಯನ್ನು ಉಳಿಸಿದೆ.


ಸುಮಾರು ನೂರಕ್ಕಿಂತ ಹೆಚ್ಚು ಭೂತಗಳಿದ್ದರೂ ಕೆಲವೇ ಭೂತಗಳ ಆರಾಧನೆ ರೂಢಿಯಲ್ಲಿದೆ. ರಕ್ತೇಶ್ವರಿ, ಪಿಲಿ ಚಾಮುಂಡಿ, ಬೊಬ್ಬರ್ಯ, ಕಲ್ಲುರ್ಟಿ, ಕಲ್ಕುಡ, ಪಂಜುರ್ಲಿ ಇತ್ಯಾದಿ ಭೂತಗಳ ನೇಮ ಹೆಚ್ಚು ನಡೆಯುತ್ತದೆ. ಇವುಗಳಲ್ಲಿ ಕಲ್ಲುರ್ಟಿ, ಕಲ್ಕುಡ ಭೂತಗಳ ನೇಮ ಮನೆಯಲ್ಲಿ ನಡೆದರೆ, ಉಳಿದ ಭೂತಗಳ ನೇಮ 'ಸ್ಥಾನ'ವೆಂಬ ಗುಡಿಗಳ ಹೊರಗೆ ನಡೆಯುತ್ತದೆ. ಒಂದು ಮನೆಯಲ್ಲಿ ಹಿರಿಯನಾದವನು ಮಾತ್ರ ಭೂತಾರಾಧನೆಯಲ್ಲಿ ಭಾಗವಹಿಸಲು ಅರ್ಹನಿರುತ್ತಾನೆ. ಇವನೊಡನೆ ಭೂತದ ಪಾತ್ರಿ ಮತ್ತು ವೇಷ

ಹಾಕಿದವನು ಸಂಭಾಷಣೆ ನಡೆಸುತ್ತಾನೆ. ಇಂಥವರು ಮಡಿ, ಮೈಲಿಗೆ, ಉಪವಾಸದಿ ವ್ರತಗಳನ್ನು ಶ್ರದ್ಧೆಯಿಂದ ಆಚರಿಸಬೇಕಾಗುತ್ತದೆ. ಊರ ಗುರಿಕಾರರು ಭೂತಗಳ 'ಸ್ಥಾನ'ಗಳಲ್ಲಿ ಸೇರಿ ಊರಿನ ಜನರ ವಾದ ವಿವಾದಗಳ ರಾಜಿ ಪಂಚಾಯಿತಿ ನಡೆಸುತ್ತಾರೆ. ಭೂತಕ್ಕೆ ಹರಕೆ ಹೇಳಿಕೊಂಡವರು ನೇಮ ನಡೆಸುವುದುಂಟು.

ಭೂತಾರಾಧನೆಯು ತುಳುನಾಡಿನ ಸಂಸ್ಕೃತಿಯ ಅವಿಭಾಜ್ಯ ಅಂಗ. ಹಿರಿಯರ ದೈವಾರಾಧನೆಯೇ ಭೂತಾರಾಧನೆ. ಅತ್ಯಂತ ಪರಾಕ್ರಮ ತೋರಿಸಿ, ಸೇವೆ ಸಲ್ಲಿಸಿ, ವೀರಮರಣವನ್ನಪ್ಪಿದವರು, ಇಲ್ಲವೆ ಮಾಯವಾದವರು ಭೂತಗಳೆಂದು ಆರಾಧಿಸಲ್ಪಡುತ್ತಾರೆ. ಬೊಬ್ಬರ್ಯ, ಕಲ್ಕುಡ, ಕಲ್ಲುರ್ಟಿ, ಕೋಟಿ ಚನ್ನಯ ಮೊದಲಾದ ಭೂತಗಳು ಈ ವರ್ಗಕ್ಕೆ ಸೇರಿದವು. ಲೋಕೋದ್ಧಾರಕ್ಕಾಗಿ ಶಿವ–ವಿಷ್ಣು–ದೇವಿಯರಿಂದ ಭೂಲೋಕಕ್ಕೆ ಕಳುಹಿಸಲ್ಪಟ್ಟ ಗಣಗಳಲ್ಲಿ ಜೋಮಾವತ್ತಿ, ಪಂಜುರ್ಲಿ, ಹೊರನಾಡಿನಿಂದ ಬಂದ ಭೂತಗಳಲ್ಲಿ ವಿಷ್ಣುಮೂರ್ತಿ, ಶಿರಾಡಿ ಭೂತ ಇಂಥವುಗಳು. ಭೂತಗಳ ಆವಾಸಸ್ಥಾನಕ್ಕೆ ಗುಡಿಗಳು, ಮಾಡಗಳು, ಬನಗಳು, ಕಲ್ಲುಗಳು ಇವೆ. ಅವುಗಳಿಗೆ ಕೋಲ, ನೇಮ ಕೊಡುವುದುಂಟು. ಅವುಗಳ ಕಥೆ, ಕಾರಣೀಕ, ಪವಾಡಗಳನ್ನು ಸಾರುವ ಸಂಧಿ ಪಾಡ್ದನಗಳು ಇವೆ.

ಮರಗಾಲು ಕುಣಿತ

ಮರಗಾಲು ಕುಣಿತವು ಪೂರ್ಣ ಪ್ರಮಾಣದ ಹವ್ಯಾಸಿ ಮನರಂಜನಾ ಕಲೆ, ಜಾತ್ರೆ ಉತ್ಸವ ಮೊದಲಾದ ವಿಶಿಷ್ಟ ಸಂದರ್ಭಗಳಲ್ಲಿ ಮೋಜಿಗಾಗಿ, ರಂಜನೆಗಾಗಿ ಈ ಕಲೆಯನ್ನು ಪ್ರದರ್ಶಿಸುವರು. ಕೋಲಾರ, ಧಾರವಾಡ, ಮಂಡ್ಯ, ಮೈಸೂರು ಮತ್ತು



ಉತ್ತರ ಕನ್ನಡ ಜಿಲ್ಲೆಗಳಲ್ಲಿ ರೂಢಿಯಲ್ಲಿರುವ ಈ ಕಲೆಯು ಜಾತ್ಯಾತೀತವಾದುದು.

ಮರಗಾಲುಗಳನ್ನು ಹಗುರವಾದ ಆದರೆ ತುಂಬಾ ಗಟ್ಟಿಯಾದ ಹಾಲಿವಾಣ, ಎಸಳಿ ಮರಗಳಿಂದ ತಯಾರಿಸುತ್ತಾರೆ. ಮರಗಾಲುಗಳು ಕನಿಷ್ಟ ಮೂರು-ನಾಲ್ಕು ಅಡಿಯಿಂದ ಎಂಟು ಹತ್ತು ಅಡಿಗಳವರೆಗೂ ಉದ್ದ ಇರುತ್ತವೆ ಐದಾರು ಇಂಚು ಸುತ್ತಳತೆಯನ್ನು ಹೊಂದಿರುತ್ತವೆ. ಮೇಲುಭಾಗದಲ್ಲಿ ಪಾದಗಳನ್ನು ಊರಲು ಅನುಕೂಲವಾಗುವಂತೆ ಮೆಟ್ಟಿಲಿನ ಆಕಾರದಲ್ಲಿ 'ಕಂಡು' ಮಾಡಿ ನಯಗೊಳಿಸಿರುತ್ತಾರೆ.

ಮರಗಾಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಮೊದಲು ಕಲಾವಿದರು ಮೊಣಕಾಲುಗಳವರೆಗೆ ಬಟ್ಟೆ ಸುತ್ತಿಕೊಳ್ಳುತ್ತಾರೆ. ಅನಂತರ ಹಿಮ್ಮಡಿಗಳ ಮೇಲೆ ಹೆಜ್ಜೆ ಭಾರ ಬೀಳದಂತೆ ಮರಗಾಲುಗಳ ಮೇಲೆ ನಿಂತು ಜಾರದಂತೆ ಅದನ್ನು ಭದ್ರವಾಗಿ ಕಾಲಿಗೆ ಕಟ್ಟಿಕೊಳ್ಳುತ್ತಾರೆ. ಗುರುವಿನ ಮೂಲಕ ಕಲಿಯುವ ಈ ಕಲೆಯಲ್ಲಿ ಸಮತೋಲನ

ಕಾಯ್ದುಕೊಳ್ಳುವುದಕ್ಕೆ ಕೌಶಲ್ಯ ಬೇಕು. ಸಮತೋಲನ ಸಿಗುವವರೆಗೂ ಕೈ ಆಸರೆಗೆ ಉದ್ದನಾದ ಕೋಲು ಅಥವಾ ಸಹಾಯಕರ ನೆರವು ಪಡೆಯುತ್ತಾರೆ. ಸಮತೋಲನ ಸಿಕ್ಕ ನಂತರ ಯಾವ ಆಧಾರವೂ ಇಲ್ಲದೆ ಹೆಜ್ಜೆಗಳನ್ನು ಎತ್ತಿ ಎತ್ತಿ ಹಾಕುತ್ತಾ ವಿವಿಧ ಭಾವ ಭಂಗಿಗಳಲ್ಲಿ ಕುಣಿಯುತ್ತಾರೆ.

ತೀರಾ ಅಪಾಯಕಾರಿಯಾದ ಈ ಕುಣಿತದಲ್ಲಿ ತುಸು ಹೆಜ್ಜೆ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಆದರೂ ಮರಗಾಲು ಕಟ್ಟಿಕೊಂಡು ವೇಗವಾಗಿ ಓಡುವ ನುರಿತ ಕಲಾವಿದರುಗಳಿದ್ದಾರೆ. ಕುಣಿಯುವವರ ಎದುರಿನಲ್ಲಿ ವ್ಯಕ್ತಿಯೊಬ್ಬನನ್ನು ನಿಲ್ಲಿಸಿ ಆತನ ತಲೆಯ ಮೇಲಿರಿಸಿದ ರೂಪಾಯಿ ನಾಣ್ಯವನ್ನು ಮರಗಾಲಿನವರು ಕುಣಿಯುತ್ತಲೇ ಬಾಗಿ ಬಾಯಿಯಿಂದ ಅಥವಾ ಕಣ್ಣಿನ ರೆಪ್ಪೆಯಿಂದ ಮೇಲೆ ಎತ್ತುವ ಚಮತ್ಕಾರಗಳನ್ನು ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಮರಗಾಲುಗಳು ಆಳೆತ್ತರದವು. ಅವುಗಳನ್ನು ಕಟ್ಟಿಕೊಂಡು ಅವರು ನಡೆಸುವ ಕುಣಿತವೂ ಸಹ ವಿಶೇಷವಾದದ್ದು.

ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತ

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ, ಕುಮಟಾ, ಗೋಕರ್ಣ, ಅಂಕೋಲ, ಕಾರವಾರದ ಗುಡ್ಡಗಾಡು ಪ್ರದೇಶಗಳಲ್ಲಿ ಹಾಗೂ ಸಮುದ್ರದ ತಟಗಳಲ್ಲಿ ವಾಸಿಸುವ ಹಾಲಕ್ಕಿ ಒಕ್ಕಲಿಗರು ನಡೆಸುವ ಸುಗ್ಗಿ ಕುಣಿತವು ವರ್ಣರಂಜಿತವಾದ ಪ್ರದರ್ಶನ ಕಲೆ. ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಬೆಳೆ ಕೈ ಸೇರಿದಾಗ ತಮಗುಂಟಾದ ಸಂತೋಷವನ್ನು ಅಭಿವ್ಯಕ್ತಗೊಳಿಸಲು ನಡೆಸುವ ಕುಣಿತವಿದು. ಚಳಿಗಾಲ ಕಳೆದು ವಸಂತಮಾಸವು ಕಾಲಿಡುತ್ತಿದ್ದಂತೆ ಸುಗ್ಗಿಯು ಆರಂಭವಾಗುತ್ತದೆ.



ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ ಹಾಲಕ್ಕಿ ಒಕ್ಕಲಿಗರು ತುಂಬಾ ಆಸಕ್ತಿ ವಹಿಸುತ್ತಾರೆ.

ಸುಗ್ಗಿ ಕುಣಿತದಲ್ಲಿ ಹಿರಿ ಸುಗ್ಗಿ ಮತ್ತು ಕಿರಿ ಸುಗ್ಗಿ ಎಂದು ಎರಡು ವಿಧಗಳಿವೆ. ಕಿರಿ ಸುಗ್ಗಿ ಕುಣಿತಕ್ಕೆ ಸಾದಾ ಉಡುಗೆ ತೊಡುಗೆಗಳು, ಹಿಮ್ಮೇಳಕ್ಕೆ ತಾಳ–ಜಾಗಟೆ, ಗುಮಟೆಗಳಿದ್ದರೆ ಸಾಕು. ಆದರೆ ಹಿರಿ ಸುಗ್ಗಿ ಕುಣಿತ ಅದ್ದೂರಿ ಯಾದುದು ಮತ್ತು ಆಕರ್ಷಣೀಯವಾದುದು. ಹಿರಿ ಸುಗ್ಗಿ ಕುಣಿತಕ್ಕೆ ಕಲಾವಿದರುಗಳಿಗೆ ಪ್ರಮುಖ ಶಿರೋಭೂಷಣವಾದ ಪೊಗಡೆ ತುರಾಯಿಗಳು ಬೇಕೇ ಬೇಕು. ಈ ತುರಾಯಿಯನ್ನು ಬಣ್ಣ ಬಣ್ಣದ ಕಾಗದ, ಬೆಂಡು, ಬೇಗಡೆಗಳಿಂದ ತೆನೆಗಳ ಮೇಲೆ ಹಕ್ಕಿಗಳು ಕುಳಿತಂತೆ ಕಾಣುವ ಹಾಗೆ ಗುಡಿಗಾರರುಗಳಿಂದ ಸಿದ್ಧಪಡಿಸಿ ತರುತ್ತಾರೆ. ಇಲ್ಲವೆ ಪಾಯಿಜಾಮವನ್ನು ತೊಡುತ್ತಾರೆ. ಮೇಲುಗಡೆಗೆ ಕೆಂಪು–ಹಸಿರು–ಹಳದಿ ಬಣ್ಣದ ನಿಲುವಂಗಿಯನ್ನು ಧರಿಸಿ ಅದರ ಮೇಲೆ ಜಾಕೀಟು ಹಾಕಿ ಸೊಂಟಕ್ಕೆ ಅಡ್ಡವಸ್ತ್ರವನ್ನು ಪಟ್ಟಿಯಂತೆ

ಕಟ್ಟಿಕೊಳ್ಳುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿ ಕೊರಳಿಗೆ ಮುತ್ತಿನ ಇಲ್ಲವೆ ಬೇಗಡೆ ಮಣಿಸರಗಳನ್ನು ಧರಿಸುತ್ತಾರೆ. ತಲೆಗೆ ರುಮಾಲು ಸುತ್ತಿ ಅದರ ಮೇಲೆ ಬೇಗಡೆಗಳಿಂದ ಅಲಂರಿಸಿದ ಪೊಗಡೆ ತುರಾಯಿಯನ್ನು ಕಟ್ಟಿಕೊಳ್ಳುತ್ತಾರೆ. ತುರಾಯಿಯ ಕೆಳಗಡೆ ಹಣೆಯ ಮೇಲೆ ಬರುವಂತೆ, ಬೇಗಡೆ ಮಣಿ ಹಾಗೂ ಕನ್ನಡಿಯ ಚೂರುಗಳನ್ನು ಒಪ್ಪವಾಗಿ ಕೂರಿಸಿದ ಕಮಾನಿನಾಕಾರದ ಮುಂಗಟ್ಟು ಕಟ್ಟಿಕೊಂಡು, ಮುತ್ತಿನ ಸರಗಳನ್ನು ಇಳಿಬಿಡುತ್ತಾರೆ. ತಲೆಯ ಹಿಂಬದಿಗೆ ತುರಾಯಿಯ ಕೆಳಗೆ ಬೆನ್ನ ಮೇಲೆಲ್ಲಾ ಒನೆದಾಡುವಂತೆ ಕಾಗದ, ಚೆಂಡು, ಬೇಗಡೆಗಳಿಂದ ತಯಾರಿಸಿದ ಮಾಲೆಗಳನ್ನು ಇಳಿಬಿಡುತ್ತಾರೆ. ವರ್ಣರಂಜಿತ ಪೋಷಾಕು ಮತ್ತು ತುರಾಯಿಯನ್ನು ಧರಿಸಿದ ಕಲಾವಿದರು ಕೈಯಲ್ಲಿ ಕೋಲು ಮತ್ತು ನವಿಲುಗರಿ ಕುಂಚಗಳನ್ನು ಹಿಡಿದು ಹಿಮ್ಮೇಳದ ವಾದ್ಯಗಳ ಬಡಿತದ ಗತ್ತುಗಳಿಗೆ ಅನುಗುಣವಾಗಿ ಕೋಲು ಹುಯ್ಯುತ್ತಾ ಕುಣಿಯಲಾರಂಭಿಸುತ್ತಾರೆ. ಸುಗ್ಗಿ ಕುಣಿತಕ್ಕೆ ಇಂತಿಷ್ಟೆ ಜನರಿರಬೇಕೆಂಬ ನಿಯಮವೇನಿಲ್ಲ. ಎಷ್ಟು ಜನ ಬೇಕಾದರೂ ಭಾಗವಹಿಸಬಹುದು. ಹಾಡುಗಾರರು ಹಾಡುವ ಪದಗಳನ್ನು ಸುಗ್ಗಿ ಕುಣಿತದ ಕಲಾವಿದರು ಪುನರುಚ್ಚರಿಸುತ್ತಾ ಕೋಲಾಡಿ ಕುಣಿಯುತ್ತಾರೆ. ಹಿಮ್ಮೇಳದ ತಾಳ ಲಯ ಗತಿಗನುಗುಣವಾಗಿ ಕುಣಿಯುವವರ ಕುಣಿತ ಹಾಗೂ ಅಂಗಾಂಗಗಳ ಚಲನೆಯ ಭಂಗಿಯೂ ಬದಲಾಗುತ್ತದೆ. ಸುಗ್ಗಿ ಕುಣಿತದ ಕೋಲಾಟದಲ್ಲಿ ಚಿನ್ನ, ರನ್ನ, ಬೆಳ್ಳಿ, ಕಂಚಿನಕೋಲು, ಸಂಪಿಗೆ, ಮಲ್ಲಿಗೆ ಹೂವಿನ ಕೋಲು, ಸೋಗೆ ನವಿಲು, ಕತ್ತರಿ, ಜಡೆ ಕೋಲು ಹೀಗೆ ವೈವಿಧ್ಯಮಯ ಕೋಲಾಟದ ಪ್ರಕಾರಗಳಿವೆ. ಕಲಾವಿದರು ಕೋಲಾಟವಾಡುತ್ತಲೇ ಸಮಾನಾಂತರವಾಗಿ ವರ್ತುಲಾಕಾರದಲ್ಲಿ ಚೌಕಾಕಾರದಲ್ಲಿ ನಿಂತು, ಕುಳಿತು, ಕುಪ್ಪಳಿಸಿ, ಬೆನ್ನು ಬಾಗಿಸಿ ಬೇಟೆಯಾಡುವ ರೀತಿಯಲ್ಲಿ ಇಲ್ಲವೆ ಕೋಟೆ ಭೇಧಿಸುವ ರೀತಿಯಲ್ಲಿ

ಪರಸ್ಪರ ಹೆಣೆದುಕೊಂಡು ಹೊಕ್ಕಾಡಿ ಕುಣಿಯುವುದು ಚಿತ್ತಾಕರ್ಷಕವಾದ ದೃಶ್ಯ.

ನವಿಲುಗರಿ ಕುಂಚಗಳನ್ನು ಹಿಡಿದ ಕುಂಚದ ಮೇಳದವರು ಎಡಗೈಯಲ್ಲಿ ಹಿಡಿದ ನವಿಲು ಕುಂಚದ ಬುಡಕ್ಕೆ ಬಲಗೈಯಲ್ಲಿ ಹಿಡಿದ ಕೋಲಿನಿಂದ ಮೆಲ್ಲನೆ ಲಯಬದ್ಧವಾಗಿ ಕುಟ್ಟುತ್ತಾ ಗುಮಟೆ ವಾದ್ಯಮೇಳದ ಲಯಗತಿಗನುಗುಣವಾಗಿ ಜೋ ಹೋ ಜೋ, ಸೋ ಹೋ ಸೋ, ಓಹೋ ಸಾ, ದಯ್ಯೋ-ದಯ್ಯೋ ಎಂದು ಸಾಮೂಹಿಕವಾಗಿ ಹೊಯ್ಲು ಹಾಕುತ್ತಾ ವೈವಿಧ್ಯಮಯ ಭಂಗಿಗಳಲ್ಲಿ ಕುಣಿಯುತ್ತಾರೆ. ತಾಳ, ಮದ್ದಳೆ, ಗುಮಟೆಗಳ ವಾದನದ ಏರಿಳಿತಗಳಿಗೆ ಅನುಗುಣವಾಗಿ ಕುಣಿತದವರ ಚಲನೆ, ಅಂಗಾಂಗ ವಿನ್ಯಾಸಗಳಲ್ಲಿ ಏರಿಳಿತಗಳುಂಟಾಗುತ್ತವೆ. ಕಲಾವಿದರು ಸರಪಳಿಯ ಮಾದರಿಯಲ್ಲಿ ಹೆಣೆದುಕೊಂಡು ಇಲ್ಲವೆ ವರ್ತುಲಾಕಾರವಾಗಿ, ಅರೆ ವರ್ತುಲಾಕಾರವಾಗಿ ನಿಂತು ಹೊಯ್ಲು ಹಾಕುತ್ತಾ ಕುಣಿಯುತ್ತಾರೆ.

ಹಾಲಕ್ಕಿ ಹೆಂಗಸರು ಸುಗ್ಗಿ ಕುಣಿತದಲ್ಲಿ ಪಾಲ್ಗೊಳ್ಳುವುದಿಲ್ಲ. ಗಂಡಸರೇ ಹೆಂಗಸರ ಪಾತ್ರವನ್ನು ನಿರ್ವಹಿಸುತ್ತಾರೆ. ಸುಗ್ಗಿ ಕುಣಿಯುವ ಹಾಲಕ್ಕಿ ಒಕ್ಕಲಿಗರನ್ನು 'ಸುಗ್ಗಿಮಕ್ಕಳು' ಎಂದೇ ಕರೆಯುತ್ತಾರೆ. ಹಾಲಕ್ಕಿ ಒಕ್ಕಲಿಗರಲ್ಲಿ ಸುಗ್ಗಿ ಕುಣಿತಕ್ಕೆ ಸಂಬಂಧಿಸಿದಂತೆ ನಂಬಿಕೆಗಳು ಬೆಳೆದು ಬಂದಿವೆ. ನವಿಲುಗರಿ ಕುಂಚ ಕುಣಿತದಲ್ಲಿ ಕುಣಿಯುವಾಗ ಕುಂಚವು ಕೈತಪ್ಪಿ ಕೆಳಗೆ ಬಿದ್ದರೆ, ಸೀತೆ ಕಣಿಯನ್ನು ಹೇಳುತ್ತ ಕುಂಚವನ್ನು ಮೇಲೆತ್ತಬೇಕು ಮತ್ತು ತಪ್ಪುದಂಡ ಕಟ್ಟಬೇಕು. ತುರಾಯಿ-ಬೇಗಡೆಗಳ ಖರ್ಚನ್ನು ಆಯಾ ಕಲಾವಿದರೇ ಭರಿಸಬೇಕು. ಸುಗ್ಗಿ ಕುಣಿಯುವುದರಿಂದ ಸಕಾಲಕ್ಕೆ ಮಳೆ-ಬೆಳೆಯಾಗುತ್ತದೆ. ತ್ರಿಮೂರ್ತಿಗಳು ಸಂತಸಗೊಳ್ಳುತ್ತಾರೆ. ರೋಗರುಜಿನಗಳು ತಗುಲುವುದಿಲ್ಲ. ಮಕ್ಕಳಾಗದವರಿಗೆ ಮಕ್ಕಳಾಗುತ್ತವೆ. ಸಮೃದ್ಧ ಬೆಳೆ ಬರುತ್ತದೆ ಇತ್ಯಾದಿ ನಂಬಿಕೆಗಳು ಹಾಲಕ್ಕಿ ಜನಾಂಗದಲ್ಲಿ ರೂಢಿಯಲ್ಲಿವೆ.